ಜಿಲ್ಲಾಧಿಕಾರಿಯವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.
(ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ)

# ಪ್ರಕಟಣೆ

## ಜಿಲ್ಲಾ ಮಟ್ಟದ ಪ್ರವೇಶ ಪರೀಕ್ಷೆ-2010

2010-11ನೇ ಸಾಲಿಗೆ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶ ಬಯಸುವ ಹಾಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಯಾಯ ತಾಲ್ಲೂಕುಗಳ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಣಾಧಿಕಾರಿಗಳ ಕಛೇರಿ(ಬಿ.ಸಿ.ಎಂ.ಶಾಖೆ), ಆಯಾಯ ಪ್ರಾಂಶುಪಾಲರು/ನಿಲಯಪಾಲಕರು, ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಇಲ್ಲಿ ಅರ್ಜಿಗಳನ್ನು ಪಡೆದು, ಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಿಸಿದ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಸಲ್ಲಿಸಿ, ಅದೇ ದಿನ ಪ್ರವೇಶ ಪರೀಕ್ಷೆ ಹಾಜರಾತಿ ಪತ್ರವನ್ನು ಪಡೆಯಲು ದಿ: 26-02-2010 ಕಡೆ ದಿನಾಂಕವಾಗಿರುತ್ತದೆ. ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆಯನ್ನು ದಿ:28-03-2010ರಂದು ಆಯಾ ತಾಲ್ಲೂಕು ಕೇಂದ್ರಗಳಲ್ಲಿ ಬೆಳಗ್ಗೆ 11.00 ರಿಂದ ಮಧ್ಯಾಹ್ನ 1.30ರವರೆಗೆ ನಡೆಸಲಾಗುವುದು.

ವಸತಿ ಶಾಲೆಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಇಲಾಖೆಯ ಹೆಸರು | ತಾಲ್ಲೂಕು | ಮೊರಾರ್ಜಿ ದೇಸಾಯಿ/ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ | ವಸತಿ ಶಾಲೆ ಸ್ಥಳ | ವರ್ಗ | ಲಭ್ಯವಿರುವ ಸ್ಥಾನಗಳು | ಶಿಕ್ಷಣ ಮಾಧ್ಯಮ | ಲಿಂಗವಾರು ವಿವರ |
|---|---|---|---|---|---|---|---|---|
| 1 | ಸಮಾಜ ಕಲ್ಯಾಣ ಇಲಾಖೆ | ದೇವನಹಳ್ಳಿ | ಮೊರಾರ್ಜಿ ದೇಸಾಯಿ ವಸತಿ ಶಾಲೆ | ಕುಂದಾಣ | ಪರಿಶಿಷ್ಟ ಪಂಗಡ | 50 | ಆಂಗ್ಲ | ಸಹಶಿಕ್ಷಣ |
| 2 | ಸಮಾಜ ಕಲ್ಯಾಣ ಇಲಾಖೆ | ದೊಡ್ಡಬಳ್ಳಾಪುರ | ಮೊರಾರ್ಜಿ ದೇಸಾಯಿ ವಸತಿ ಶಾಲೆ | ದೊಡ್ಡಬಳ್ಳಾಪುರ | ಪರಿಶಿಷ್ಟ ಜಾತಿ | 50 | ಆಂಗ್ಲ | ಸಹಶಿಕ್ಷಣ |
| 3 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಹೊಸಕೋಟೆ | ಮೊರಾರ್ಜಿ ದೇಸಾಯಿ ವಸತಿ ಶಾಲೆ | ಸೂಲಿಬೆಲೆ | ಹಿಂದುಳಿದ ವರ್ಗ | 50 | ಆಂಗ್ಲ | ಸಹಶಿಕ್ಷಣ |
| 4 | ಸಮಾಜ ಕಲ್ಯಾಣ ಇಲಾಖೆ | ಹೊಸಕೋಟೆ | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ | ಹೊಸಕೋಟೆ | ಪರಿಶಿಷ್ಟ ಜಾತಿ | 50 | ಆಂಗ್ಲ | ಹೆಣ್ಣು ಮಕ್ಕಳು ಮಾತ್ರ |

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಆಯ್ಕೆಯಾಗಿ, ಪ್ರವೇಶ ಪಡೆಯುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಎಲ್ಲಾ ಸೌಲಭ್ಯವನ್ನು ಸರ್ಕಾರದ ವತಿಯಿಂದ ಉಚಿತವಾಗಿ ನೀಡಲಾಗುತ್ತದೆ. ಯಾವುದೇ ವಿಧವಾದ ಶುಲ್ಕ ಪಾವತಿಸಬೇಕಿಲ್ಲ.

ಅರ್ಜಿಗಳ ಜೊತೆಯಲ್ಲಿ ಬಣ್ಣದ 2 ಭಾವಚಿತ್ರಗಳನ್ನು ಮಾತ್ರ ಲಗತ್ತಿಸಬೇಕು. ಇನ್ನಾವುದೇ ದಾಖಲೆಗಳನ್ನು ಲಗತ್ತಿಸುವ ಅಗತ್ಯವಿರುವುದಿಲ್ಲ, ಆದರೆ ಅಗತ್ಯ ದಾಖಲೆಗಳನ್ನು ಕೌನ್ಸಿಲಿಂಗ್ ದಿನ ಹಾಜರುಪಡಿಸಬೇಕು.

(ಆರ್.ಕೆ.ರಾಜು) 9.2.10
ಜಿಲ್ಲಾಧಿಕಾರಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

dc letter-2

ಅರ್ಜಿಗಳು ದೊರೆಯುವ ಸ್ಥಳಗಳು:

1) ಸಂಬಂಧಪಟ್ಟ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು.
2) ಸಂಬಂಧಪಟ್ಟ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ.
3) ಸಂಬಂಧಪಟ್ಟ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ.
4) ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಣಾಧಿಕಾರಿಗಳ ಕಛೇರಿ.
5) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಸಂಪಂಗಿರಾಮನಗರ, ಬೆಂಗಳೂರು.
6) ಜಿಲ್ಲಾ ಅಧಿಕಾರಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯಗೋಪುರ, ಬೆಂಗಳೂರು.